

ವಿದ್ಯಾ ಗುರುಗಳು –

**ಶ್ರೀ ಚತುರ್ವೇದಿ ರಾಮಚಂದ್ರಾಚಾರ್ಯ,**

**ಶ್ರೀ ನರಸಿಂಹಮೂರ್ತಾಚಾರ್ಯರು**

**ಶಿಷ್ಯರು – ಶ್ರೀ ರಘುನಂದನಾಚಾರ್ಯರು**
**( ಶ್ರೀ ವಿಶ್ವನಂದನತೀರ್ಥರು)**
**ಶ್ರೀ ಪುಷ್ಕರಾಚಾರ್ಯರು**
**ಶ್ರೀ ಎಸ್.ಎನ್. ರಾಮಚಂದ್ರಾಚಾರ್ಯರು**
**ಇವರಲ್ಲದೆ ಸುಮಾರು ಬೇರೆ ಹತ್ತಾರು ಶಿಷ್ಯರುಗಳಿದ್ದರು**

ಮೈಸೂರಿನ ಉತ್ತರಾಧಿಮಠದ ಬಳಿಯಿರುವ ಶ್ರೀ ದೇವೇಂದ್ರತೀರ್ಥ ಮಠದಲ್ಲಿ ತಾವೇ ಶ್ರೀ ರಾಯರ ಮೃತ್ತಿಕಾ ವೃಂದಾವನವನ್ನು ಪ್ರತಿಷ್ಠಾಪಿಸಿ, ಅಲ್ಲಿನ ಜನಗಳಿಗೆ ರಾಯರ ದರ್ಶನವಾಗುವಂತೆ ಅನುಗ್ರಹಿಸಿದ್ದಾರೆ.

ದೇವೇಂದ್ರತೀರ್ಥರು ಪೂಜಿಸುತ್ತಿದ್ದ ವಿಗ್ರಹ – ಶ್ರೀಧೀರೇಂದ್ರತೀರ್ಥ ಕರಾರ್ಚಿತ ಶ್ರೀ ರಾಮಚಂದ್ರದೇವರು.

ತಮ್ಮ ಅವಸಾನ ಸಂದರ್ಭದಲ್ಲಿ ತಮ್ಮ ವೃಂದಾವನವನ್ನು ಎಲ್ಲಿ ಮಾಡಬೇಕೆಂದು ತೀರ್ಮಾನಿಸುತ್ತಿದ್ದಾಗ, ಶ್ರೀಪಾದರಾಜಮಠದ ಪರಮಪೂಜ್ಯ ಶ್ರೀ ವಿಜ್ಞಾನನಿಧಿ ತೀರ್ಥರು ದೇವೇಂದ್ರತೀರ್ಥರ ವೃಂದಾವನಕ್ಕೆ ಮುಳಬಾಗಿಲಿನ ನರಸಿಂಹತೀರ್ಥದಲ್ಲಿ ಅವಕಾಶ ಮಾಡಿಕೊಟ್ಟರು. ಅಷ್ಟೇ ಅಲ್ಲ ಪ್ರತಿದಿನ ಶ್ರೀ ದೇವೇಂದ್ರತೀರ್ಥರ ವೃಂದಾವನಕ್ಕೆ ಪೂಜೆಯ ಸಕಲ ಸವಲತ್ತನ್ನೂ ವ್ಯವಸ್ಥೆ ಮಾಡಿದ್ದಾರೆ.

ಶ್ರೀಪಾದಂಗಳವರು ವೈಷ್ಣವ ಧರ್ಮ ಪ್ರಚಾರದಲ್ಲಿ ಬಹಳ ನಿಷ್ಠುರವಾದಿಗಳು. ಯಾವುದೇ ಸಂದರ್ಭ ಬಂದರೂ ತಮ್ಮ ದೀಕ್ಷೆಯನ್ನು ಬಿಟ್ಟುಕೊಟ್ಟವರಲ್ಲ. ತಾವು ಹಲವಾರು ಗ್ರಂಥಗಳನ್ನು ಬರೆದಿದ್ದಾರೆ.

ಅವುಗಳೆಂದರೆ

೧. ಸುಖ

೨. ಅಮೃತವಾಣಿ –

೩. ಶ್ರೀ ವಿಷ್ಣು ವ್ರತ ವಿಮರ್ಶೆ – ಏಕಾದಶಿ, ದ್ವಾದಶಿ, ಗೋಕುಲಾಷ್ಟಮಿ ಬಗ್ಗೆ ಸ್ಪಷ್ಟನೆ ಪ್ರಮೇಯಾನುಸಾರ

ಶ್ರೀ ದೇವೇಂದ್ರತೀರ್ಥರ ಕೆಲವು ನುಡಿಮುತ್ತುಗಳು

(ಮೂಲ ಲೇಖನ ಆಧಾರ ಶ್ರೀ ವಿಶ್ವನಂದನತೀರ್ಥರು)

೧. ವಿಷ್ಣುಭಕ್ತರಿಂದ ಅವಶ್ಯ ಅನುಷ್ಠೇಯಗಳಾದವುಗಳು ಮೂರು –

ಅ)ಏಕಾದಶಿ ಉಪವಾಸ (ಇಲ್ಲದಿದ್ದರೆ ದೇವರ ದ್ರೋಹ),

ಆ) ಗೋಪೀಚಂದನ ಧಾರಣ (ಯಮಭಯ ನಿವೃತ್ತಿ)

ಇ) ಭಗವದ್ಭಕ್ತರ ಸೇವ (ಜ್ಞಾನ ಸಾಧನ)

೨. ಏಕಾದಶಿಯ ಫಲ ಪಾಯಿಕವಾಗಿ ದಿವಾಸ್ವಾಪಾದಿಗಳಿಂದ ನಷ್ಟವಾದರೂ, ಉಳಿದಿರುವ ಸ್ವಲ್ಪೇ ಪುಣ್ಯವು ಪರಿಣಾಮಿಕಾರಿಯಾಗುತ್ತದೆ. ಚೆನ್ನಾಗಿ ತೊಳೆಯದ ಸಾರಿನ ಪಾತ್ರೆಯಲ್ಲಿ ಹಾಕಿದ ಹಾಲು ಒಡೆಯುತ್ತದಷ್ಟೆ.

೩. ವಿದ್ಧೈಕಾದಶೀ ದಿನವೇ ಏಕಾದಶೀ ಶ್ರಾದ್ಧವು ವಿಹಿತ, ಮಧ್ಯಾಹ್ನದಲ್ಲಿ ಏಕಾದಶೀ ಇದ್ದ ಮಾತ್ರದಿಂದ ದಶಮೀದಿನ ಏಕಾದಶಿ ಶ್ರಾದ್ಧವು ಕೂಡದು.

೪. ಶಯನೈಕಾದಶೀ ಮತ್ತು ಉತ್ಥಾನದ್ವಾದಶಿಗಳಲ್ಲಿ ಅನಧ್ಯಯನ.

೫. ಯಾವ ಏಕಾದಶಿ ಭೋಜನಕ್ಕೆ ವಿಹಿತವೋ ಅದು ಶ್ರಾದ್ಧಕ್ಕೂ ವಿಹಿತ. ಆ ಸಂದರ್ಭದಲ್ಲಿ ಏಕಾದಶಿ ಶ್ರಾದ್ಧ ದಶಮಿಯೇ ಅನುಷ್ಟೇಯ.

೭. ರಾಜಾಪರಾಧ ಮಾಡಿದರೆ ಊಟ ಸೇರುವುದಿಲ್ಲ. ನಿದ್ರೆ ಬರುವುದಿಲ್ಲ. ಆದರೆ ಶ್ರೀ ಹರಿಗೆ ಅಪರಾಧ ಮಾಡಿ ಏಕಾದಶೀ ವ್ರತಾಚರಣೆ ಮಾಡದೇ ಸುಖವಾಗಿ ಊಟ, ನಿದ್ರೆ, ಮಾಡುತ್ತಾರೆ.

೭. ಕೃತ ಯುಗದಲ್ಲಿ ಒಬ್ಬನ ತಪ್ಪು ಸಪ್ತದ್ವೀಪದಸ್ಥರಿಗೆ ಬಾಧಕ, ತ್ರೇತಾಯುಗದಲ್ಲಿ ಜಂಬೂದ್ವೀಪಪರ್ಯಂತ, ದ್ವಾಪರದಲ್ಲಿ ಗ್ರಾಮಪರ್ಯಂತ, ಕಲಿಯುಗದಲ್ಲಿ ಕರ್ತೃವಿಗೆ ಮಾತ್ರ ಲೇಪ.

೮. ಕಲಿಯುಗದಲ್ಲಿ ಪಾಪಕರ್ಮಕ್ಕೆ ಫಲಕಡಿಮೆ. ಪುಣ್ಯಕರ್ಮಕ್ಕೆ ಫಲಜಾಸ್ತಿ. ಇದಕ್ಕೆ ಕಾರಣ – ಪಾಪಕರ್ಮಕ್ಕೆ ಪ್ರೋತ್ಸಾಹ ಹೆಚ್ಚು ಪರಮ ಪಾಪಿಯಾದ ಕಲಿಯೇ ದೊರೆ. ಅವರ ಪ್ರಾಬಲ್ಯಕ್ಕೆ ಸಿಕ್ಕಿ ಪಾಪಕರ್ಮ ಮಾಡಿದಾಗ ಜೀವಿಯ ಸ್ವಂತ ಲೆಕ್ಕಕ್ಕೆ ಬರುವ ಪಾಪ ಕಡಿಮೆ. ಪುಣ್ಯಕರ್ಮಕ್ಕೆ ಅನೇಕ ವಿಘ್ನ. ಅದನ್ನು ಮೀರಿಕೊಂಡು ಮಾಡಲು ಜೀವಿಯ ಪ್ರಯತ್ನಕ್ಕೆ ಬೆಲೆ ಕೊಟ್ಟು ಫಲ ಜಾಸ್ತಿ.

೯. ಹಾಲನ್ನು ತೊಳೆದ ಪಾತ್ರೆಗೆ ಹಾಕಿದರೆ ಉಳಿಯುತ್ತದೆ. ಕಶ್ಮಲವಿದ್ದರೆ ಒಡೆದು ಹೋಗುತ್ತದೆ. ಅದರಂತೆ ಕರ್ಮದಿಂದ ಶುದ್ಧವಾದ ಮನಸ್ಸಿನಲ್ಲಿ ವಿದ್ಯೋಪದೇಶದಿಂದ ಸಮೀಚೀನ ಜ್ಞಾನವುಂಟಾಗುತ್ತದೆ, ಇಲ್ಲದಿದ್ದರೆ ಜ್ಞಾನಾಭಾಸವು ಉಂಟಾಗುತ್ತದೆ.

೧೦. ಜ್ಞಾನವು ಹುಟ್ಟುವುದಕ್ಕೆ ಪಾಪಕರ್ಮಗಳು ಪ್ರತಿಬಂಧಕ. ಜ್ಞಾನೋತ್ಪತ್ತಿಯಾದ ಮೇಲೆ ಪಾಪ ಮಾಡಿದರೆ ಜ್ಞಾನವು ಸ್ರವಿಸುತ್ತದೆ.

೧೧. ಸಂತೆಗೆ ಹೋಗಿ ಬರುವವರಲ್ಲಿ ನಾಲ್ಕು ತಂಡ –

ಅ) ಕೆಲವರು ಉಪವಾಸವೇ ಹೋಗಿ ದೇಹದಾರ್ಢ್ಯದಿಂದ ಅನಾಯಾಸವಾಗಿ ಬಂದು ಆಹ್ನಿಕ ಮಾಡಿಕೊಳ್ಳುತ್ತಾರೆ.

ಆ) ಕೆಲವರು ಆಹ್ನಿಕ, ಭೋಜನ ಮುಗಿಸಿ ಅನಾಯಾಸದಿಂದ ಹೋಗಿ ಬರುತ್ತಾರೆ.

ಇ) ಕೆಲವರು ದೇಹದಾರ್ಢ್ಯವಿಲ್ಲದೆ ಹೋಗಿ ಅತ್ಯಂತ ಬಳಲಿ ಬರುತ್ತಾರೆ. ನಿಷ್ಟರಾದ್ದರಿಂದ ಸಂತೆಯಲ್ಲಿ ಸಿಕ್ಕಿದ್ದು ತಿನ್ನುವುದಿಲ್ಲ,
ಈ) ಕೆಲವರು ಹೋಗಿ ಸಿಕ್ಕ ಸಿಕ್ಕದ್ದನ್ನು ತಿನ್ನುತ್ತಾರೆ.

ಇದರಿಂದ ಸನ್ಯಾಸಿಗಳಾಗುವವರಲ್ಲೂ ನಾಲ್ಕು ವಿಧ –
ಅ) ಕೆಲವರು ಬ್ರಹ್ಮಚಾರಿಗಳಾಗಿ ಯೋಗ್ಯತೆ ಇರುವುದರಿಂದ ಆಶ್ರಮಧರ್ಮರಕ್ಷಣೆ ಮಾಡಿಕೊಳ್ಳುತ್ತಾರೆ.
ಆ) ಕೆಲವರು ಗೃಹಸ್ಥರಾಗಿ ಭೋಗಾನಂತರ ವಿರಕ್ತರಾಗಿ ಸನ್ಯಾಸಿಗಳಾಗುತ್ತಾರೆ.
ಇ) ಕೆಲವರು ತಮ್ಮ ದೇಹಧರ್ಮಕ್ಕೆ ತಕ್ಕದ್ದಲ್ಲವಾದರೂ ಆಶ್ರಮ ಸ್ವೀಕರಿಸಿ ಬಳಲುತ್ತಾರೆ. ನಿಷ್ಠರಾದ್ದರಿಂದ ಆಶ್ರಮಧರ್ಮ ಕೆಡಿಸಿಕೊಳ್ಳುವುದಿಲ್ಲ
ಈ) ಕೆಲವರು ಆಶ್ರಮಭ್ರಷ್ಠರಾಗುತ್ತಾರೆ. ಇವರಲ್ಲಿ ಮೂರು ಜನರು ಯೋಗ್ಯರು, ನಾಲ್ಕನೆಯವರು ಅಯೋಗ್ಯರು.

೧೨. ಸರ್ವಕರ್ಮ ಪರಿತ್ಯಾಗವನ್ನು ಶಾಸ್ತ್ರವು ವಿಧಿಸುವುದಿಲ್ಲ. ನಿಷಿದ್ಧಕಾಮ ಪರಿತ್ಯಾಗವನ್ನೇ ವಿಧಿಸುತ್ತದೆ.

೧೩. ಆತ್ಮಹತ್ಯೆಯು ಎರಡು ವಿಧದಿಂದ ನಿಂದ್ಯ
ಅ) ಏನಿಲ್ಲದಿದ್ದರೂ ದೇವರ ಸ್ಮರಣರೂಪ ಸಾಧನವಾದರೂ ಮಾಡಿಕೊಳ್ಳಲು ಸಾಧ್ಯವಾದ ದೇಹಹಾನಿ.
ಆ) ವಾಯುದೇವರು ಮಾಡುತ್ತಿರುವ ಹಂಸಮಂತ್ರ ಜಪದ ಪುಣ್ಯಲಾಭವು ತಪ್ಪುತ್ತದೆ. ಅವರಾಗಿಯೇ ದಯಮಾಡಿಸಿ ನಮ್ಮ ದೇಹದಲ್ಲಿ ಜಪ ಮಾಡುತ್ತಿದ್ದಾಗ, ಅವರನ್ನು ಬಿಟ್ಟುಹೋಗಿರೆಂದು ಬಲಾತ್ಕರಿಸಿದಂತಾಗುತ್ತದೆ.

೧೪. ಅಗ್ನಿಯಲ್ಲಿ ಹೋಮಿಸುವುದಕ್ಕಿಂತ ಬ್ರಾಹ್ಮಣ ಮುಖದಲ್ಲಿ ಹೋಮಿಸುವುದು ಶ್ರೇಷ್ಟವೆಂದ ಮಾತ್ರದಿಂದ ವಿಧ್ಯುಕ್ತ ವೈಶ್ವದೇವಾದಿ ಹೋಮಗಳನ್ನು ಪರಿತ್ಯಾಗ ಮಾಡಬಾರದು. ವಿಧ್ಯತಿಕ್ರಮಣ ಮಾಡಿದರೆ ವಿಶೇಷವಾಗಿ ಬ್ರಾಹ್ಮಣ ಭೋಜನ ಮಾಡಿಸಬೇಕು. ಹೇಗೆಂದರೆ, ದಾಸನಿಗೆ ಭೋಜನ ಮಾಡಿಸುವುದಕ್ಕಿಂತ ಬ್ರಾಹ್ಮಣನಿಗೆ ಭೋಜನ ಮಾಡಿಸುವುದು ಮಿಗಿಲು. ಆದರೆ ದಾಸನಿಗೆ ಊಟವೇ ಹಾಕುವುದಿಲ್ಲವೆನ್ನಲಾಗುವುದಿಲ್ಲ. ಅದರಂತೆ, ಅದರಿಂದ ಶ್ರೇಷ್ಠವಾದ್ದನ್ನು ಮಾಡಿ ಕನಿಷ್ಠವಾದದ್ದನ್ನು ಬಿಡೋಣವೆನ್ನುವುದು ಸರಿಯಲ್ಲ. ಒನಕೆ, ಸಣ್ಣಕಡ್ಡಿ ಇವುಗಳು ಶ್ರೇಷ್ಟ ಕನಿಷ್ಟವಾದರೂ ಹಲ್ಲಿನಲ್ಲಿ ಸಿಕ್ಕಿದ್ದನ್ನು ತೆಗಯಲು ಕಡ್ಡಿಯೇ ಬೇಕಾಗುತ್ತದಷ್ಠೆ.

೧೫. ಮಲಮೂತ್ರ ಬಂಧನ ಮಾಡಿಕೊಂಡರೆ ಶೂದ್ರನಿಗೆ ಸಮಾನನಾಗುತ್ತಾನೆ. ಆಗ ಕರ್ಮಾಧಿಕಾರವಿಲ್ಲ.

೧೬. ಪ್ರತಿಮಾದಲ್ಲಿ ನೈವೇದ್ಯ ಸಮರ್ಪಣೆ ಮಾಡಿದಾಗ ಶ್ರೀಹರಿಯು ಕಣ್ಣಿನಿಂದ ನೋಡುತ್ತಾ ಅಗ್ನಿಯಲ್ಲಿ ವೈಶ್ವದೇವ ಮಾಡಿದಾಗ ಸ್ಪರ್ಶ ಮಾಡುತ್ತಾನೆ. ಬ್ರಾಹ್ಮಣರಿಗೆ ಭೋಜನ ಮಾಡಿಸಿದಾಗ ಮುಖದಿಂದ ಸ್ವೀಕರಿಸುತ್ತಾನೆ.

೧೭. ಪರರಿಗೆ ಅತಿಸಂಕಟಕೊಟ್ಟಾಗ, ಅವರು ಸಂಕಟಪಡುತ್ತಾ ದೃಷ್ಟಿ ಬೀರಿದರೆ ಅದರಿಂದ ಸಂಕಟ ಕೊಟ್ಟವನ ಪೂರ್ವಪುಣ್ಯವು ನಾಶವಾಗುತ್ತದೆ, ಪಾಪಿಯಾದ ಪರಸ್ತ್ರೀಯ ಉಸಿರು ಮಾತ್ರದಿಂದಲೇ ಪೂರ್ವಪುಣ್ಯವು ನಾಶವಾಗುವಂತೆ.

೧೮. ಆಷಾಢ ಮಾಸದಲ್ಲಿ ಕಡಲೇಬೇಳೆ ನಿಷಿದ್ಧ. ಜ್ಯೇಷ್ಠ ಪೂರ್ಣಿಮಾದಿಂದ ಆಷಾಢ ಪೂರ್ಣಿಮಾದವರೆಗೆ ಆಷಾಢಮಾಸ.

ಇನ್ನೇನು ಟೀಕಾರಾಯರ ಪುಣ್ಯದಿನ ಹತ್ತಿರವಿರುವುದರಿಂದ ಆವತ್ತಿನಿಂದಲೇ ಕಡಲೆಯು ಗ್ರಾಹ್ಯವೆಂದು ಸಂಪ್ರದಾಯ.

೧೯. ನೈವೇದ್ಯಕ್ಕೆ ಮೊದಲಿನ ಧೂಪಾರತಿ, ಏಕಾರತಿಗಳು ದೈತ್ಯೋಚ್ಚಾಟನಕ್ಕೆ ಅದನ್ನು ಸ್ವೀಕರಿಸಬಾರದು.

೨೦. ಸಜ್ಜನರು ಸಾವನ್ನು ಬಯಸಲೂ ಬಾರದು, ಸಾವಿಗೆ ಅಂಜಲೂ ಬಾರದು.

೨೧. ದಾನವನ್ನು ಬಲಗೈಯಿಂದ ಅಗ್ನಿತೀರ್ಥದಿಂದ ಸ್ವೀಕರಿಸಬೇಕು, ಸನ್ಯಾಸಿಗಳಿಗೆ ಅಗ್ನಿಯು ನಷ್ಟವಾಗಿರುವುದರಿಂದ ಕೈಯಲ್ಲಿ ಪರಿಗ್ರಹ ಮಾಡಬಾರದು.

೨೨. ತರ್ಜನಿ ಬೆರಳಿನಲ್ಲಿ ಅಮೃತವಿರುತ್ತದೆ. ಆದ್ದರಿಂದ (ಶಿಷ್ಠ ಅಮೃತವಿರುವುದರಿಂದ) ಆ ಬೆಟ್ಟನ್ನು ದೇವರ ಪೂಜೆಗೆ ಉಪಯೋಗಿಸಬಾರದು.

೨೩. ಗೃಹಸ್ಥಾಶ್ರಮಿಗಳಿಗೆ ಮಕ್ಕಳ ಚೇಷ್ಟೆ ಸಹಿಸುವುದೂ ತಪಸ್ಸು

೨೪. ರಾತ್ರಿಯ ಕಾಲದಲ್ಲಿ ಮೊಸರೂ, ಗಂಜಿಯೂ ನಿಷಿದ್ಧ.

೨೫. ಪ್ರತಿಮೆಗಳನ್ನು ಮರದ ಪೀಠದಲ್ಲಿ ಕೂಡಿಸಿದರೆ ಸಾನ್ನಿಧ್ಯ ಹೋಗುತ್ತದೆ.

೨೬. ಸೂತಕ, ವೃದ್ಧಿಗಳಲ್ಲಿ ಸ್ತ್ರೀಸಂಗವು ನಿಷಿದ್ಧ. ಆಗ ಗರ್ಭೋತ್ಪತ್ತಿಯಾದರೆ ವಂಶವೇ ಅಪವಿತ್ರ.

೨೭. ಶವಾನುಯಾನ ಮಾಡಿದರೆ ಯಜ್ಞೋಪವೀತ ಬದಲಾಯಿಸಬೇಕು. ಚಂಡಾಲ ಸ್ಪರ್ಶಕ್ಕೆ ಬದಲಿಸಲು ವಿಧಿಯಿಲ್ಲ. ಶಿಷ್ಠಾಚಾರವುಂಟು.

೨೮. ಬ್ರಾಹ್ಮಣಪಾದೋದಕವು ಪಾನಾರ್ಹವೆಂದು ವಿಜಯಧ್ವಜೀಯದಲ್ಲಿದೆ. ಆದ್ದರಿಂದ ಗುರುಪಾದೋದಕವು ಸುತರಾಂ ಗ್ರಾಹ್ಯ.

೨೯. ಪ್ರಾಣಾಯಾಮದಿಂದ ಈಗಿನ ಪಾಪನಾಶ, ಪ್ರತ್ಯಾಹಾರದಿಂದ ಕಿಲ್ಬಿಷವೆಂಬ ಪೂರ್ವಪಾಪದ ನಾಶ.

೩೦. ಕೆಲವರು ಅಂತ:ಶೌಚವೇ ಸಾಕೆಂದೂ, ಕೆಲವರು ಬಾಹ್ಯಶೌಚವೇ ಸಾಕೆಂದೂ ಹೇಳುವರು. ಇಬ್ಬರೂ ಮೂರ್ಖರು, ಎರಡೂ ಅವಶ್ಯಕ.

೩೧. ಗುರುಗಳು ಸುಳ್ಳು ಹೇಳಿದರೆಂದು ಸ್ಥಾಪನೆ ಮಾಡುವುದು ಗುರುಹತ್ಯಾ ಸಮಾನ.

೩೨. ನಕ್ಷತ್ರ ಬಿದ್ದುದನ್ನು ನೋಡಬಾರದು (ನೋಡಿದರೆ ಪಾಪ). ಅಕಸ್ಮಾತ್ ನೋಡಿದರೆ ಹಸಿರು ಮರ ನೋಡಬೇಕು. ಇದರ ಅಭಿಪ್ರಾಯ – ಪುಣ್ಯಜೀವಿಗಳು ಪುಣ್ಯವು ನಷ್ಟವಾಗಲು ಕೆಳಗೆ ಬೀಳುತ್ತಾರೆ. ತೋಜೋಮಯ ದೇಹವಾದ್ದರಿಂದ ನಕ್ಷತ್ರದಂತೆ ಹೊಳೆಯುತ್ತಾರೆ. ಬೀಳುವವರನ್ನು ನೋಡುವುದೂ ಪಾಪ. ಬೀಳುವ ದು:ಸ್ಥಿತಿಯಲ್ಲಿರುವವರನ್ನು ಕಂಡಾಗ ಸಮಾಧಾನ ಮಾಡಿಕೊಳ್ಳಲು ಜೀವಂತ ವೃಕ್ಷವನ್ನು ನೋಡಬೇಕು. ಇದು ರಾಜಸ ಧರ್ಮ. ನಕ್ಷತ್ರ ಬಿದ್ದುದನ್ನು ಅಕಸ್ಮಾತ್ ಕಂಡಾಗ ಹರಿಸ್ಮರಣೆ ಮಾಡುವುದು ಸಾತ್ವಿಕ ಧರ್ಮ. ನೋಡಿ ಸಂತೋಷ ಪಡುವುದು ತಾಮಸ ಧರ್ಮ.

ಮುಂದುವರಿಯುವುದು______